RNU AIR DHARWAD

# AUGUST 15, 2024

## AKASHAVANI - DHARWAD

## PRADESH SAMACHARA (KANNADA) 06.45 AM

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಆಕಾಶವಾಣಿಯ ನಮ್ಮ ಆತ್ಮೀಯ ಕೇಳುಗರಿಗೆಲ್ಲ, 78ನೇ ಸ್ವಾತಂತ್ರ್ಯ ದಿನಾಚರಣೆಯ ಹಾರ್ದಿಕ ಶುಭಾಶಯಗಳು.**

<><><>

**ಮುಖ್ಯಾಂಶಗಳು:**

<><><>

- **ನಾಡಿನೆಲ್ಲೆಡೆ, 78ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ; ಪ್ರಧಾನಮಂತ್ರಿಯವರ ಅತಿಥಿಯಾಗಿ, ದಿಲ್ಲಿ ತಲುಪಿದ, ರಾಜ್ಯದ ಸಾಧಕ ಶ್ರೀ ಸಾಮಾನ್ಯರು.**
- **ರಾಜ್ಯದ 31 ಜಿಲ್ಲೆಗಳಲ್ಲಿ, ಆಯಾ ಜಿಲ್ಲಾ ಉಸ್ತುವಾರಿ ಸಚಿವರಿಂದ ಈ ಬೆಳಗ್ಗೆ, ರಾಷ್ಟ್ರ ಧ್ವಜಾರೋಹಣ; ಎಲ್ಲೆಡೆ ಹಬ್ಬದ ವಾತಾವರಣ.**
- **ಸ್ವಾತಂತ್ರ್ಯೋತ್ಸವದ ಹಿನ್ನೆಲೆ, ವ್ಯಾಪಕ ಸುರಕ್ಷತಾ ಕ್ರಮ – ಸಚಿವ ಜಿ.ಪರಮೇಶ್ವರ್.**
- **ಕರ್ನಾಟಕ ನಾಮಕರಣದ 50ನೇ ವರ್ಷಾಚರಣೆ; ನಾಡಿನಾದ್ಯಂತ ವಿಶೇಷ ಕಾರ್ಯಕ್ರಮ – ಪುರುಷೋತ್ತಮ ಬಿಳಿಮಲೆ.**

<><><>

**ಈಗ ವಾರ್ತೆಗಳ ವಿವರ**

<><><>

**ಭಾರತದ 78ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ ಇಂದು. ದಿಲ್ಲಿಯ ಐತಿಹಾಸಿಕ ಕೆಂಪು ಕೋಟೆಯ ಮೇಲೆ, ಪ್ರಧಾನಮಂತ್ರಿ ನರೇಂದ್ರ ಮೋದಿ, ರಾಷ್ಟ್ರವನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.**

**ದಿಲ್ಲಿಯ ಕೆಂಪುಕೋಟೆಯ ಮೇಲೆ, ಇಂದು ಬೆಳಗ್ಗೆ ನಡೆಯಲಿರುವ, 78 ನೇ ಸ್ವಾತಂತ್ರ್ಯೋತ್ಸವ ಹಿನ್ನೆಲೆ, ರಾಷ್ಟ್ರ ಧ್ವಜಾರೋಹಣದ ಪ್ರಧಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು, ರಾಜ್ಯದ ಆರು ಗ್ರಾಮ ಪಂಚಾಯಿತಿಗಳಿಂದ, ಮಹಿಳಾ ಅಧ್ಯಕ್ಷರನ್ನು ಪ್ರಧಾನಮಂತ್ರಿಯವರು, ಆಮಂತ್ರಿಸಿದ್ದಾರೆ.**

<><><>

**ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲೂಕಿನ, ಗೆದರೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಕುಮಾರಿ ಲಕ್ಷ್ಮೀ ನರಸಮ್ಮ, ದಕ್ಷಿಣಕನ್ನಡ ಜಿಲ್ಲೆ ಬಂಟ್ವಾಳ ತಾಲೂಕಿನ, ಪೆರುವಾಯಿ ಗ್ರಾಮ ಪಂಚಾಯತಿ ಅಧ್ಯಕ್ಷೆ ನಫೀಜಾ, ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ, ಕಮತನೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ರಾಜೇಶ್ವರಿ ಗುತ್ತಿ, ಕಲಬುರಗಿ ಜಿಲ್ಲೆ ತಾಜ್ ಸುಲ್ತಾನಪುರ ಗ್ರಾಮ**

ಪಂಚಾಯತಿ ಉಪಾಧ್ಯಕ್ಷೆ ಜಯಶ್ರೀ, ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕಿನ, ಕನೂರು ಗ್ರಾಮ ಪಂಚಾಯತಿ ಅಧ್ಯಕ್ಷೆ ಪಿ.ಟಿ. ದೇವಿ ಮತ್ತು ಚಾಮರಾಜನಗರ ತಾಲೂಕಿನ, ಅಟ್ಟಗುಳಿಪುರ ಗ್ರಾಮ ಪಂಚಾಯತಿ ಅಧ್ಯಕ್ಷೆ ಶಿವಮ್ಮ, ಆಹ್ವಾನಿತ ಅತಿಥಿಗಳಾಗಿದ್ದಾರೆ.

<><><>

ಪಂಚಾಯತ್‌ರಾಜ್ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಈ ಅಧ್ಯಕ್ಷರುಗಳನ್ನು ಅಭಿನಂದಿಸಿದ್ದಾರೆ.

<><><>

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ, ಟಿ.ಕೆ.ರಮೇಶ್ ನೇತೃತ್ವದಲ್ಲಿ, ಗ್ರಾಮ ಪಂಚಾಯ್ತಿ ಅಧ್ಯಕ್ಷರುಗಳ ತಂಡ, ಸಮಾರಂಭದಲ್ಲಿ ಪಾಲ್ಗೊಂಡಿದೆ.

<><><>

ಬೀದರ್ ಜಿಲ್ಲೆ, ಔರಾದ್ ತಾಲೂಕಿನ, ಧೂಪತ ಮಹಾಗಾಂವ ಗ್ರಾಮದ ಗೃಹಿಣಿ ಸುಜಾತಾ ನಾಗಭೂಷಣ ಪಾಟೀಲ, ಬಸವೇಶ್ವರ ಮಹಿಳಾ ಸ್ವ ಸಹಾಯ ಸಂಘದ ಸದಸ್ಯೆ. ಸರ್ಕಾರದ ನೆರವಿನಿಂದ ಒಂದೂವರೆ ಲಕ್ಷ ರೂಪಾಯಿ ಬಂಡವಾಳ ಪಡೆದು, ಪೌಷ್ಟಿಕಾಂಶಯುಕ್ತ ಶೇಂಗಾ ಚಿಕ್ಕಿ ಸಿದ್ಧ ಪಡಿಸುವ, ಗೃಹ ಉದ್ದಿಮೆಗೆ ಚಾಲನೆ ನೀಡಿದ್ದಾರೆ. ಔರಾದ್ ಹಾಗೂ ಕಮಲನಗರ ತಾಲೂಕಿನ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಮಕ್ಕಳಿಗೆ, ಕೈಯಿಂದ ತಯಾರಿಸಿದ ಚಿಕ್ಕಿ ಅವರು ಪೂರೈಸುತ್ತಿದ್ದಾರೆ. ಪ್ರಧಾನಮಂತ್ರಿಯವರ ಆಹ್ವಾನದ ಮೇರೆಗೆ, ದಿಲ್ಲಿ ತಲುಪಿರುವ ಸುಜಾತಾ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

ಸುಜಾತಾ ನಾಗಭೂಷಣ ಧ್ವನಿ 28 ಸೆಕೆಂದುಗಳು

<><><>

ಉತ್ತರಕನ್ನಡ ಜಿಲ್ಲೆ, ಜೋಯಿಡಾ ತಾಲೂಕು, ಕುಂಬಾರವಾಡಾದ ನಿವಾಸಿ, ರೇಷ್ಮಾ ಹಾಗೂ ಶಾಂತಾರಾಮ ಕಾಮತ ದಂಪತಿಯನ್ನು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದಿನ ಸ್ವಾತಂತ್ರ್ಯ ದಿನಾಚರಣೆಯ ಪ್ರಧಾನ ಕಾರ್ಯಕ್ರಮದ ಅತಿಥಿಯಾಗಿ, ಹೊಸ ದಿಲ್ಲಿಗೆ ಆಹ್ವಾನಿಸಿದ್ದಾರೆ. ಕಾಳಿ ರೈತ ಉತ್ಪಾದಕರ ಕಂಪೆನಿಯ ವಿಶ್ವಸ್ಥರಾದ ಈ ದಂಪತಿ, ಗೆಡ್ಡೆ, ಗೆಣಸು ಮೇಳದ ಮೂಲಕ, ವನವಾಸಿಗರ ಅಪರೂಪದ ಖಾದ್ಯಗಳನ್ನು, ನಗರಿಗರ ತಾಟಿಗೆ ಆನುವಂತೆ ಮಾಡಿದವರು. 78ನೇ ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳಲು ದಿಲ್ಲಿ ತಲುಪಿರುವ ರೇಷ್ಮಾ ಶಾಂತಾರಾಮ ಕಾಮತ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ರೇಷ್ಮಾ ಶಾಂತಾರಾಮ ಕಾಮತ ಧ್ವನಿ 45 ಸೆಕೆಂದುಗಳು

<><><>

ಬಳ್ಳಾರಿ ಜಿಲ್ಲೆ, ಕಂಪ್ಲಿ ತಾಲೂಕಿನ, ದೇವಲಾಪುರ ಗ್ರಾಮದ, ರೈತ ದಂಪತಿ ಮಲ್ಲಿಕಾರ್ಜುನ ಗೌಡ್ರು ಮತ್ತು ಮೀನಾಕ್ಷಿ, ಪ್ರಧಾನಮಂತ್ರಿಯವರ ಪ್ರೀತಿಯ ಆಮಂತ್ರಣದ ಮೇರೆಗೆ, ಇಂದಿನ ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳಲು, ಹೊಸ ದಿಲ್ಲಿಯ ಕೆಂಪು ಕೋಟೆ ತಲುಪಿದ್ದಾರೆ. ಮಣ್ಣಿನ ಆರೋಗ್ಯ ಮತ್ತು ಗುಣಮಟ್ಟ ಕಾಪಾಡುವ ನಿಟ್ಟಿನಲ್ಲಿ, ವಿ 'ಮುಕ್ತ ಆಹಾರ ಉತ್ಪಾದನೆಯ ಕೃಷಿ ಕೈಗೊಂಡು, 'ಸಾಯಿಲ್ ಹೆಲ್ತ್ ಕಾರ್ಡ್' ಪಡೆಯಲು, ಇತರ ರೈತರಿಗೆ ಮಾರ್ಗದರ್ಶನ ಮಾಡಿದ, ಈ ದಂಪತಿಯನ್ನು, ಪ್ರಧಾನಮಂತ್ರಿ ಗುರುತಿಸಿ, ಆಹ್ವಾನಿಸಿರುವುದು ವಿಶೇಷ. ಪ್ರದೇಶ ಸಮಾಚಾರಕ್ಕಾಗಿ, ಪ್ರಗತಿಪರ ಕೃಷಿಕ ಮಲ್ಲಿಕಾರ್ಜುನ ಗೌಡ್ರು, ತಮ್ಮ ಖುಷಿ ಹಂಚಿಕೊಂಡಿದ್ದಾರೆ.

<><><>

ಕೃಷಿಕ ಮಲ್ಲಿಕಾರ್ಜುನ ಗೌಡ್ರು ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಜಗದೀಪ ಧನಕರ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಹಾಗೂ ವಿಪಕ್ಷ ನಾಯಕ ಆರ್.ಆಶೋಕ ಸೇರಿದಂತೆ, ಸಾಹಿತ್ಯ, ಸಂಗೀತ, ರಂಗಭೂಮಿ ಹಾಗೂ ಸಾಂಸ್ಕೃತಿಕ ಜಗತ್ತಿನ ಗಣ್ಯರು, ನಾಡಿ ಜನತೆಗೆ ಶುಭಾಶಯ ಕೋರಿದ್ದಾರೆ.

<><><>

ರಾಜ್ಯದ 31 ಜಿಲ್ಲೆಗಳ, ಜಿಲ್ಲಾ ಕ್ರೀಡಾಂಗಣಗಳಲ್ಲಿ, ಆಯಾ ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಸಚಿವರು, 78ನೇ ಸ್ವಾತಂತ್ರ್ಯೋತ್ಸವ ನಿಮಿತ್ತ, ಇಂದು ಬೆಳಗ್ಗೆ 9 ಗಂಟೆಗೆ, ರಾಷ್ಟ್ರ ಧ್ವಜಾರೋಹಣ ನೆರವೇರಿಸಿ, ಭಾಷಣ ಮಾಡುವರು.

<><><>

ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ, ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳಲಾಗಿದೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ್ ತಿಳಿಸಿದ್ದಾರೆ.

<><><>

ಬೆಂಗಳೂರು ಆಂತರಿಕ ಭದ್ರತಾ ವಿಭಾಗದ, ಅಪರ ಪೊಲೀಸ್ ಮಹಾ ನಿರ್ದೇಶಕ ಎಂ. ಚಂದ್ರಶೇಖರ್ ಸೇರಿದಂತೆ, ರಾಜ್ಯದ 19 ಜನ ಪೊಲೀಸರಿಗೆ, ರಾಷ್ಟ್ರಪತಿಯವರ ವಿಶಿಷ್ಟ ಸೇವಾ ಪದಕ ಹಾಗೂ ಶ್ಲಾಘನೀಯ ಸೇವಾ ಪದಕ ಪ್ರಕಟಿಸಲಾಗಿದೆ.

<><><>

ದಾವಣಗೆರೆ ಜಿಲ್ಲೆಯ 150 ಅಮೃತ ಸರೋವರಗಳ ಬಳಿ, ಇಂದು ಬೆಳಗ್ಗೆ 9 ಗಂಟೆಗೆ ಧ್ವಜಾರೋಹಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ತಿಳಿಸಿದ್ದಾರೆ.

<><><>

'ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ' ಧ್ಯೇಯದೊಂದಿಗೆ, ಕರ್ನಾಟಕ ನಾಮಕರಣದ 50ನೇ ವರ್ಷಾಚರಣೆ ಹಿನ್ನೆಲೆ, ವಿಶೇಷ ಕಾರ್ಯಕ್ರಮಗಳನ್ನು, ನಾಡಿನಾದ್ಯಂತ ಆಯೋಜಿಸಲಾಗಿದೆ ಎಂದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರು ೋತ್ತಮ ಬಿಳಿಮಲೆ ತಿಳಿಸಿದ್ದಾರೆ. ರಾಯಚೂರು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಗೋಕಾಕ ಚಳುವಳಿ; ಹಿನ್ನೋಟ ಮತ್ತು ಮುನ್ನೋಟ, ರಾಜ್ಯ ಮಟ್ಟದ ಸಮಾವೇಶದ ಪೂರ್ವಭಾವಿ ಸಭೆಯ, ಅಧ್ಯಕ್ಷತೆ ವಹಿಸಿ ಮಾತನಾಡಿದರು. ಇದೇ 28 ರಂದು ಗುಡ್ಡಾಪುರದಲ್ಲಿ ಮೊದಲ ಕಾರ್ಯಕ್ರಮ, ಸಪ್ಟೆಂಬರ್ 24 ಮತ್ತು 25 ರಂದು ಮಂಗಳೂರಿನಲ್ಲಿ ಎರಡನೇ ಕಾರ್ಯಕ್ರಮ, ಮೂರನೇ ಕಾರ್ಯಕ್ರಮ ಅಕ್ಟೋಬರ್ 5 ರಂದು ರಾಯಚೂರಿನಲ್ಲಿ ಹಾಗೂ ನಾಲ್ಕನೇ ಕಾರ್ಯಕ್ರಮ, ನವೆಂಬರ್ 1 ರಂದು ಬೆಂಗಳೂರಿನಲ್ಲಿ ನಡೆಯಲಿದೆ ಎಂದರು.

<><><>

ವಿಜಯಪುರದ ಐತಿಹಾಸಿಕ ಪ್ರವಾಸಿ ಸ್ಥಳಗಳನ್ನು ಅಭಿವೃದ್ಧಿಪಡಿಸಿ, ಸ್ಥಳೀಯ ಯುವ ಜನತೆಗೆ ಉದ್ಯೋಗ ಹಾಗೂ ಜಿಲ್ಲೆಯ ಆದಾಯ ವೃದ್ಧಿಗೆ, ಕ್ರಮ ಕೈಗೊಳ್ಳುವುದಾಗಿ, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ವಿಜಯಪುರದಲ್ಲಿ ಆಯೋಜಿತ, ಕರ್ನಾಟಕ ಟೂರಿಸಂ ಸೊಸೈಟಿಯ ಕನೆಕ್ಟ್–ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಪ್ರವಾಸಿಗರಿಗೆ ಸೂಕ್ತ ಮೂಲ ಸೌಕರ್ಯ, ಸುತ್ತಲಿನ ಪ್ರವಾಸಿ ತಾಣಗಳನ್ನು ತಲುಪಲು, ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಿದಲ್ಲಿ, ದೇಶ ವಿದೇಶಗಳ ಪ್ರವಾಸಿಗರು ಸಹ ಭೇಟಿ ನೀಡುವರು, ಎಂದರು.

<><><>

ವಿಜಯನಗರ ಜಿಲ್ಲೆ, ಹೊಸಪೇಟೆಯ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ 19ರ ಚೈನ್ ಲಿಂಕ್ ತುಂಡಾದ ಹಿನ್ನೆಲೆ, ತಾತ್ಕಾಲಿಕ ತಡೆ ಗೇಟ್ ಅಳವಡಿಕೆ ಕಾರ್ಯಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್‌ಖಾನ್, ಪೂಜೆ ಸಲ್ಲಿಸಿ, ಚಾಲನೆ ನೀಡಿದರು. ಜಲಾಶಯದ ತಾಂತ್ರಿಕ ತಜ್ಞ ಕನ್ನಯ್ಯ ನಾಯ್ಡು ಅವರು, ಗೇಟ್ ನಿರ್ಮಾಣ ಹಾಗೂ ಅಳವಡಿಕೆ ಕಾರ್ಯ ಎರಡು ದಿನಗಳಲ್ಲಿ ಪೂರ್ಣಗೊಳಿಸುವುದಾಗಿ, ಸಚಿವರಿಗೆ ಮಾಹಿತಿ ನೀಡಿದರು. ಜಲಾಶಯದಲ್ಲಿ ಪ್ರಸಕ್ತ 92 ಟಿ.ಎಂ.ಸಿ. ಅಡಿ ನೀರಿನ ಸಂಗ್ರಹವಿದೆ. ಸದ್ಯಕ್ಕೆ ತಾತ್ಕಾಲಿಕ ತಡೆ ಗೇಟ್‌ಅನ್ನು, ಅಳವಡಿಸಲಾಗುತ್ತಿದೆ.

<><><>

ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ್ ತಂಗಡಗಿ ಮಾತನಾಡಿ, ರೈತರ ಒಂದು ಬೆಳೆಗೆ ಅಗತ್ಯವಾದಷ್ಟು ನೀರನ್ನು ಉಳಿಸುವ, ಎಲ್ಲ ಪ್ರಯತ್ನಗಳು ನಡೆಯುತ್ತಿವೆ. ತಾತ್ಕಾಲಿಕ ಗೇಟ್ ಅಳವಡಿಕೆ ಯಶಸ್ವಿಯಾದರೆ, 15 ರಿಂದ 20 ಟಿ.ಎಂ.ಸಿ. ಅಡಿ ನೀರು ಉಳಿತಾಯವಾಗಲಿದೆ ಎಂದರು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು, ಹೊಳೆನರಸೀಪುರ ಭಾಗದಲ್ಲಿ ನಿನ್ನೆ ರಭಸದ ಮಳೆಯಾಗಿದೆ.

<><><>

ಅನರ್ಹರು ಹೊಂದಿರುವ ಬಿ.ಪಿ.ಎಲ್. ಪಡಿತರ ಚೀಟಿಗಳನ್ನು ಇದೇ 31ರ ಒಳಗೆ, ಸ್ವಯಂ ಪ್ರೇರಣೆಯಿಂದ, ಆಯಾ ತಾಲೂಕಿನ ತಹಸೀಲ್ದಾರ ಕಚೇರಿ ಅಥವಾ ಆಹಾರ ಇಲಾಖೆಯ ಕಚೇರಿಗೆ ಸಲ್ಲಿಸುವಂತೆ, ಸೂಚಿಸಲಾಗಿದೆ.

<><><>

ಅರಣ್ಯಭೂಮಿ ಒತ್ತುವರಿ ಪ್ರಕರಣಗಳು, ನ್ಯಾಯಾಲಯದಲ್ಲಿ ಇತ್ಯರ್ಥವಾಗಿ, ತೆರವಾಗಿರದ ಒತ್ತುವರಿಗಳನ್ನು ಮಾತ್ರ ಪರಿಗಣಿಸಲು, ಅಧಿಕಾರಿಗಳಿಗೆ ಸೂಚಿಸಿದ್ದಾಗಿ, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

<><><>

ಪಂಚ ಖಾತ್ರಿ ಯೋಜನೆಗಳಲ್ಲಿ ಬದಲಾವಣೆ ಅಥವಾ ಕಡಿತ ಗೊಳಿಸುವ ಯಾವುದೇ ಪ್ರಸ್ತಾವ, ರಾಜ್ಯ ಸರ್ಕಾರದ ಮುಂದಿಲ್ಲ ಎಂದು, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟ ಪಡಿಸಿದ್ದಾರೆ.

<><><>

ವಿಜಯನಗರ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್, ಜನತಾ ದರ್ಶನ ನಡೆಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ನಾಡಿನೆಲ್ಲೆಡೆ, 78ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ; ಪ್ರಧಾನಮಂತ್ರಿಯವರ ಅತಿಥಿಯಾಗಿ, ದಿಲ್ಲಿ ತಲುಪಿದ, ರಾಜ್ಯದ ಸಾಧಕ ಶ್ರೀ ಸಾಮಾನ್ಯರು.
- ರಾಜ್ಯದ 31 ಜಿಲ್ಲೆಗಳಲ್ಲಿ, ಆಯಾ ಜಿಲ್ಲಾ ಉಸ್ತುವಾರಿ ಸಚಿವರಿಂದ ಈ ಬೆಳಗ್ಗೆ, ರಾಷ್ಟ್ರ ಧ್ವಜಾರೋಹಣ; ಎಲ್ಲೆಡೆ ಹಬ್ಬದ ವಾತಾವರಣ.
- ಸ್ವಾತಂತ್ರ್ಯೋತ್ಸವದ ಹಿನ್ನೆಲೆ, ವ್ಯಾಪಕ ಸುರಕ್ಷತಾ ಕ್ರಮ – ಜಿ.ಪರಮೇಶ್ವರ್.
- ಕರ್ನಾಟಕ ನಾಮಕರಣದ 50ನೇ ವರ್ಷಾಚರಣೆ; ನಾಡಿನಾದ್ಯಂತ ವಿಶೇಷ ಕಾರ್ಯಕ್ರಮ – ಪುರು ೋತ್ತಮ ಬಿಳಿಮಲೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>